Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜ ಪತ್ರ

It contains the text of 10 Acts (Kannada

**( EXTRAORDINARY )**
( ವಿಶೇಷ ಸಂಚಿಕೆ )

भाग IX        अनुभाग 1
PART IX        SECTION 1
ಭಾಗ IX        ವಿಭಾಗ 1

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.


| | | | |
|---|---|---|---|
| सं. १ | नई दिल्ली, सोमवार, नवेंबर १६, २००९ | कार्तीक २५, १९३१ (शका) | खंड. ४१ |
| No. 1 | New Delhi, Monday, November 16, 2009 | Karthika 25, 1931 (Saka) | Vol. 41 |
| ಸಂ. ೧ | ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ | ಕಾರ್ತೀಕ ೨೫, ೧೯೩೧ (ಶಕ) | ಸಂಪುಟ. ೪೧ |


**Ministry of Law and Justice**
(Legislative Department)
New Delhi, 16th November, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 16ನೇ ನವೆಂಬರ್, 2009**

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಪೆಟ್ರೋಲಿಯಂ ಅಧಿನಿಯಮ, 1934

## (1934ರ ಅಧಿನಿಯಮ ಸಂಖ್ಯೆ 30)

[6ನೇ ಸೆಪ್ಟೆಂಬರ್, 1934]

ಪೆಟ್ರೋಲಿಯಂನ ಆಮದಿಗೆ, ಸಾಗಣೆಗೆ, ದಾಸ್ತಾನಿಗೆ, ಉತ್ಪಾದನೆಗೆ, ಸಂಸ್ಕರಣಕ್ಕೆ ಮತ್ತು ಸಮ್ಮಿಶ್ರಣಕ್ಕೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಪೆಟ್ರೋಲಿಯಂನ ಆಮದಿಗೆ, ಸಾಗಣೆಗೆ, ದಾಸ್ತಾನಿಗೆ, ಉತ್ಪಾದನೆಗೆ, ಸಂಸ್ಕರಣಕ್ಕೆ ಮತ್ತು ಸಮ್ಮಿಶ್ರಣಕ್ಕೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ, ಇದನ್ನು ಈ ಮುಂದಿನಂತೆ ಅಧಿನಿಯಮಿಸಲಾಗಿದೆ:-

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಪೆಟ್ರೋಲಿಯಂ ಅಧಿನಿಯಮ, 1934 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಆ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(ಎ) "ಪೆಟ್ರೋಲಿಯಂ" ಎಂದರೆ ಯಾವುದೇ ದ್ರವರೂಪದ ಹೈಡ್ರೋಕಾರ್ಬನ್ ಅಥವಾ ಹೈಡ್ರೋಕಾರ್ಬನ್ ಮಿಶ್ರಣ ಮತ್ತು ಯಾವುದೇ ದ್ರವರೂಪದ ಹೈಡ್ರೋಕಾರ್ಬನ್ನನ್ನೂ ಒಳಗೊಂಡ ಯಾವುದೇ ಸುಲಭವಾಗಿ ಉರಿ ಹತ್ತಿಕೊಳ್ಳುವ (ದ್ರವರೂಪದ, ಜಿಗುಟಾದ ಅಥವಾ ಘನರೂಪದ) ಮಿಶ್ರಣ ಎಂದು ಅರ್ಥ;

(ಬಿ) "ಎ ವರ್ಗದ ಪೆಟ್ರೋಲಿಯಂ" ಎಂದರೆ ಇಪ್ಪತ್ಮೂರು ಡಿಗ್ರಿ ಸೆಂಟಿಗ್ರೇಡಿಗಿಂತಲೂ ಕಡಿಮೆ ಜ್ವಲನ ತಾಪ ಹೊಂದಿರುವ ಪೆಟ್ರೋಲಿಯಂ ಎಂದು ಅರ್ಥ;

(ಬಿಬಿ) "ಬಿ ವರ್ಗದ ಪೆಟ್ರೋಲಿಯಂ" ಎಂದರೆ ಇಪ್ಪತ್ಮೂರು ಡಿಗ್ರಿ ಸೆಂಟಿಗ್ರೇಡ್ ಮತ್ತು ಅದಕ್ಕೂ ಮೇಲ್ಪಟ್ಟ ಆದರೆ ಅರವತ್ತೈದು ಡಿಗ್ರಿ ಸೆಂಟಿಗ್ರೇಡಿಗಿಂತ ಕಡಿಮೆ ಜ್ವಲನತಾಪವನ್ನು ಹೊಂದಿರುವ ಪೆಟ್ರೋಲಿಯಂ ಎಂದು ಅರ್ಥ;

(ಬಿಬಿಬಿ) "ಸಿ ವರ್ಗದ ಪೆಟ್ರೋಲಿಯಂ" ಎಂದರೆ ಅರವತ್ತೈದು ಡಿಗ್ರಿ ಸೆಂಟಿಗ್ರೇಡ್ ಮತ್ತು ಅದಕ್ಕೂ ಮೇಲ್ಪಟ್ಟ ಆದರೆ ತೊಂಬತ್ಮೂರು ಡಿಗ್ರಿ ಸೆಂಟಿಗ್ರೇಡಿಗಿಂತ ಕಡಿಮೆ ಜ್ವಲನತಾಪ ಹೊಂದಿರುವ ಪೆಟ್ರೋಲಿಯಂ ಎಂದು ಅರ್ಥ;

(ಸಿ) ಯಾವುದೇ ಪೆಟ್ರೋಲಿಯಂನ "ಜ್ವಲನತಾಪ" ಎಂದರೆ IIನೇ ಅಧ್ಯಾಯದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅನುಸಾರವಾಗಿ ನಿರ್ಧರಿಸಲಾದ, ಯಾವ ಅತ್ಯಂತ ಕಡಿಮೆ ಉಷ್ಣಾಂಶದಲ್ಲಿ ಆವಿವುಂಟಾಗಿ ಅದು ಉರಿ ಹೊತ್ತಿಸಿದಾಗ ಆ ಆವಿಯೂ ಅದು ತಕ್ಷಣದ ಜ್ವಾಲೆಯನ್ನು ಉಂಟುಮಾಡುವುದೋ ಆ ಯಾವುದೇ ಅತ್ಯಂತ ಕಡಿಮೆ ಉಷ್ಣಾಂಶ ಎಂದು ಅರ್ಥ;

(ಡಿ) "ಪೆಟ್ರೋಲಿಯಂನ್ನು ಸಾಗಿಸುವುದು" ಎಂದರೆ ಭಾರತದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪೆಟ್ರೋಲಿಯಂನ್ನು ಸಾಗಿಸುವುದು ಎಂದು ಅರ್ಥ ಮತ್ತು ಅದು ಭಾರತದ ಭಾಗವಲ್ಲದ ಪ್ರದೇಶದ ಮೂಲಕ ಭಾರತದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದನ್ನು ಒಳಗೊಳ್ಳುತ್ತದೆ;

(ಇ) ಪೆಟ್ರೋಲಿಯಂ "ಆಮದು" ಮಾಡಿಕೊಳ್ಳುವುದು ಎಂದರೆ ಸಾಗಣೆ ಮಾಡುವುದನ್ನು ಹೊರತುಪಡಿಸಿ ಅನ್ಯಥಾ ಅದನ್ನು ಭೂ, ಸಮುದ್ರ ಅಥವಾ ವಾಯು ಮಾರ್ಗದ ಮೂಲಕ ಭಾರತದೊಳಗೆ ತರುವುದು ಎಂದು ಅರ್ಥ;

(ಎಫ್) ಪೆಟ್ರೋಲಿಯಂನ್ನು "ದಾಸ್ತಾನು" ಮಾಡುವುದು ಎಂದರೆ ಯಾವುದೇ ಒಂದು ಸ್ಥಳದಲ್ಲಿ ಅದನ್ನು ಇಡುವುದು ಎಂದು ಅರ್ಥ, ಆದರೆ ಅದು ಸಾಗಣೆಯ ಸಾಮಾನ್ಯ ಕ್ರಮದ ಅವಧಿಯಲ್ಲಿ ಯಾವುದೇ ತಡೆಹಿಡಿದಿಡುವ ಘಟನೆಯನ್ನು ಒಳಗೊಳ್ಳುವುದಿಲ್ಲ;

(ಜಿ) "ಮೋಟಾರು ವಾಹನ" ಎಂದರೆ ಚಾಲನ ಶಕ್ತಿಯನ್ನು ಉತ್ಪಾದಿಸಲು ಪೆಟ್ರೋಲಿಯಂನ್ನು ಬಳಸುವಂಥ ಭೂ, ಜಲ ಅಥವಾ ವಾಯುವಿನ ಮೂಲಕ ಮಾನವರನ್ನು, ಪ್ರಾಣಿಗಳನ್ನು ಅಥವಾ ಸರಕುಗಳನ್ನು ಸಾಗಿಸುವ ಯಾವುದೇ ವಾಹನ, ಹಡಗು ಅಥವಾ ವಿಮಾನ ಎಂದು ಅರ್ಥ;

(ಹೆಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ.

## ಅಧ್ಯಾಯ - I

## ಪೆಟ್ರೋಲಿಯಂ ಮೇಲೆ ನಿಯಂತ್ರಣ

3. **ಪೆಟ್ರೋಲಿಯಂನ ಆಮದು, ಸಾಗಣೆ ಮತ್ತು ದಾಸ್ತಾನು.**– (1) ಯಾರೇ ವ್ಯಕ್ತಿಯು, 4ನೇ ಪ್ರಕರಣದ ಮೇರೆಗೆ ರಚಿಸಿರುವ ನಿಯಮಗಳ ಅನುಸಾರವಾಗಿಯಲ್ಲದೆ ಇತರೆ ರೀತಿಯಲ್ಲಿ ಯಾವುದೇ ಪೆಟ್ರೋಲಿಯಂನ್ನು ಆಮದು, ಸಾಗಣೆ ಅಥವಾ ದಾಸ್ತಾನು ಮಾಡತಕ್ಕದ್ದಲ್ಲ.

(2) 4ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಯಾವ ಉದ್ದೇಶಕ್ಕಾಗಿ ಲೈಸೆನ್ಸನ್ನು ಪಡೆಯಲು ಒಬ್ಬ ವ್ಯಕ್ತಿಯನ್ನು ಅಗತ್ಯಪಡಿಸಬಹುದೋ ಆ ಉದ್ದೇಶಕ್ಕಾಗಿನ ಯಾವುದೇ ಲೈಸೆನ್ಸಿನ ಷರತ್ತುಗಳ ಅನುಸಾರವಾಗಿ ಹೊರತು ಅವನು ಎ ವರ್ಗದ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳತಕ್ಕದ್ದಲ್ಲ ಮತ್ತು ಅವನು ಯಾವುದೇ ಪೆಟ್ರೋಲಿಯಂನ್ನು ಸಾಗಿಸತಕ್ಕದ್ದಲ್ಲ ಅಥವಾ ದಾಸ್ತಾನು ಮಾಡತಕ್ಕದ್ದಲ್ಲ.

4. **ಪೆಟ್ರೋಲಿಯಂನ ಆಮದು, ಸಾಗಣೆ ಮತ್ತು ದಾಸ್ತಾನಿಗೆ ಸಂಬಂಧಿಸಿದ ನಿಯಮಗಳು:**– ಕೇಂದ್ರ ಸರ್ಕಾರವು,–

(ಎ) ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳಬಹುದಾದ ಸ್ಥಳಗಳನ್ನು ನಿಯಮಿಸಿ, ಮತ್ತು ಬೇರೆ ಕಡೆ ಅದರ ಆಮದನ್ನು ನಿಷೇಧಿಸಿ;

(ಬಿ) ಪೆಟ್ರೋಲಿಯಂನ ಆಮದನ್ನು ವಿನಿಯಮನಗೊಳಿಸಿ;

(ಸಿ) ಅಪಾಯಕಾರಿ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುವುದಕ್ಕಾಗಿ ಲೈಸೆನ್ಸುಗಳಿಗೆ ಯಾವ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕೋ ಆ ಅವಧಿಗಳನ್ನು ನಿಯಮಿಸಿ, ಮತ್ತು ನಿಯಮಿಸಲಾದ ಅವಧಿಯೊಳಗಾಗಿ ಯಾವುದರ ಸಂಬಂಧದಲ್ಲಿ ಲೈಸೆನ್ಸಿಗೆ ಅರ್ಜಿ ಸಲ್ಲಿಸಿಲ್ಲವೋ ಅಥವಾ ಯಾವುದನ್ನು ನಿರಾಕರಿಸಲಾಗಿದೆಯೋ ಅಥವಾ ಯಾವುದನ್ನು ರಫ್ತು ಮಾಡಿಲ್ಲವೋ ಆ ಯಾವುದೇ ಎ ವರ್ಗದ ಪೆಟ್ರೋಲಿಯಂನ್ನು ವಶಪಡಿಸಿಕೊಳ್ಳುವ ಮೂಲಕ ಅಥವಾ ಇತರೆ ರೀತಿಯಲ್ಲಿ ವಿಲೇವಾರಿ ಮಾಡಲು ಉಪಬಂಧ ಕಲ್ಪಿಸಿ;

(ಡಿ) ಪೆಟ್ರೋಲಿಯಂನ ಸಾಗಣೆಯನ್ನು ವಿನಿಯಮನಗೊಳಿಸಿ;

(ಇ) ಪೆಟ್ರೋಲಿಯಂನ್ನು ಸಾಗಿಸುವುದಕ್ಕೆ ಬಳಸುವ ಧಾರಕಗಳ ಮತ್ತು ಪೈಪ್‌ಲೈನ್‌ಗಳ ಸ್ವರೂಪ ಮತ್ತು ಸ್ಥಿತಿಯನ್ನು ನಿರ್ದಿಷ್ಟಪಡಿಸಿ;

(ಎಫ್) ಪೆಟ್ರೋಲಿಯಂನ್ನು ದಾಸ್ತಾನು ಮಾಡಬಹುದಾದ ಸ್ಥಳಗಳನ್ನು ವಿನಿಯಮನಗೊಳಿಸಿ ಮತ್ತು ಯಾವ ಷರತ್ತುಗಳಿಗೊಳಪಟ್ಟು ದಾಸ್ತಾನು ಮಾಡಬೇಕೋ ಆ ಷರತ್ತುಗಳನ್ನು ನಿಯಮಿಸಿ;

(ಜಿ) ಪೆಟ್ರೋಲಿಯಂನ್ನು ದಾಸ್ತಾನು ಮಾಡಬಹುದಾದ ಎಲ್ಲ ಧಾರಕಗಳ ಸ್ವರೂಪ, ಸ್ಥಳ ಮತ್ತು ಸ್ಥಿತಿಯನ್ನು ನಿರ್ದಿಷ್ಟಪಡಿಸಿ;

(ಹೆಚ್) ಎ ವರ್ಗದ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುವುದಕ್ಕೆ ಮತ್ತು ಯಾವುದೇ ಪೆಟ್ರೋಲಿಯಂನ್ನು ಸಾಗಿಸುವ ಅಥವಾ ದಾಸ್ತಾನು ಮಾಡುವುದಕ್ಕೆ ಸಂಬಂಧಿಸಿದ ಲೈಸೆನ್ಸುಗಳ ನಮೂನೆ ಮತ್ತು ಷರತ್ತುಗಳನ್ನು ಮತ್ತು ಯಾವ ರೀತಿಯಲ್ಲಿ ಅಂಥ ಲೈಸೆನ್ಸುಗಳಿಗಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದೋ ಆ ರೀತಿಯನ್ನು, ಅಂಥ ಲೈಸೆನ್ಸುಗಳನ್ನು ಮಂಜೂರು ಮಾಡಬಹುದಾದ ಪ್ರಾಧಿಕಾರಗಳನ್ನು ಮತ್ತು ಅಂಥ ಲೈಸೆನ್ಸುಗಳಿಗೆ ವಿಧಿಸಬಹುದಾದ ಫೀಜುಗಳನ್ನು ನಿಯಮಿಸಿ;

(ಐ) ಪೆಟ್ರೋಲಿಯಂನ್ನು ಸಾಗಿಸುವುದಕ್ಕಾಗಿ ಲೈಸೆನ್ಸನ್ನು, ಸರಕು ರವಾನೆಗಾರನು, ಸರಕು ಪಡೆಯುವವನು ಅಥವಾ ವಾಹಕನು ಪಡೆಯತಕ್ಕದ್ದೇ ಎಂಬುದನ್ನು ಯಾವುದೇ ವರ್ಗದ ಪ್ರಕರಣಗಳಲ್ಲಿ ನಿರ್ಧರಿಸಿ;

(ಜೆ) ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳಲು, ಸಾಗಿಸಲು ಮತ್ತು ದಾಸ್ತಾನು ಮಾಡಲು, ಅಥವಾ ಅಂಥ ಯಾವುದೇ ಎರಡು ಉದ್ದೇಶಗಳಿಗಾಗಿ ಸಂಯೋಜಿತ ಲೈಸೆನ್ಸುಗಳನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸಿ;

(ಕೆ) ಪೆಟ್ರೋಲಿಯಂಗೆ ಯಾವುದೇ ನಿರ್ದಿಷ್ಟ ವಿಷಕಾರಿ ವಸ್ತುವನ್ನು ಯಾವ ಪ್ರಮಾಣದಲ್ಲಿ ಸೇರಿಸಬಹುದೋ ಆ ಪ್ರಮಾಣವನ್ನು ನಿಯಮಿಸಿ ಮತ್ತು ಯಾವುದೇ ನಿರ್ದಿಷ್ಟ ವಿಷಕಾರಿ ವಸ್ತುವು ನಿಯಮಿಸಿದ ಪ್ರಮಾಣಕ್ಕೆ ಮೀರಿದ ಪೆಟ್ರೋಲಿಯಂನ ಆಮದು, ಸಾಗಣೆ ಅಥವಾ ದಾಸ್ತಾನನ್ನು ನಿಷೇಧಿಸಿ; ಮತ್ತು

(ಎಲ್) ಸಾಮಾನ್ಯವಾಗಿ, ಪೆಟ್ರೋಲಿಯಂನ ಆಮದು, ಸಾಗಣೆ ಮತ್ತು ದಾಸ್ತಾನಿನ ಸಂಬಂಧದಲ್ಲಿ ಒದಗಿಸಿದ ಯಾವುವೇ ಸೇವೆಗಳಿಗೆ ಫೀಜುಗಳನ್ನು ವಿಧಿಸುವುದೂ ಸೇರಿದಂತೆ ಪೆಟ್ರೋಲಿಯಂನ ಆಮದು, ಸಾಗಣೆ ಅಥವಾ ದಾಸ್ತಾನಿನ ಮೇಲೆ ಸೂಕ್ತ ನಿಯಂತ್ರಣಕ್ಕಾಗಿ ಅದು ವಿಹಿತವೆಂದು ಅಭಿಪ್ರಾಯಪಡುವಂಥ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಿ

– ನಿಯಮಗಳನ್ನು ರಚಿಸಬಹುದು.

**5. ಪೆಟ್ರೋಲಿಯಂನ ಉತ್ಪಾದನೆ, ಸಂಸ್ಕರಣ ಮತ್ತು ಸಮ್ಮಿಶ್ರಣ ಮಾಡುವುದು.**– (1) ಯಾರೇ ವ್ಯಕ್ತಿಯು, (2)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಅನುಸಾರವಾಗಿ ಹೊರತು ಇತರೆ ರೀತಿಯಲ್ಲಿ ಪೆಟ್ರೋಲಿಯಂನ್ನು ಉತ್ಪಾದಿಸತಕ್ಕದ್ದಲ್ಲ, ಸಂಸ್ಕರಿಸತಕ್ಕದ್ದಲ್ಲ ಅಥವಾ ಸಮ್ಮಿಶ್ರಣಗೊಳಿಸತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು,–

(ಎ) ಯಾವ ಷರತ್ತುಗಳಿಗೊಳಪಟ್ಟು ಪೆಟ್ರೋಲಿಯಂನ ಉತ್ಪಾದನೆ, ಸಂಸ್ಕರಣ ಅಥವಾ ಸಮ್ಮಿಶ್ರಣ ಮಾಡಬಹುದೋ ಆ ಷರತ್ತುಗಳನ್ನು ನಿಯಮಿಸಿ; ಮತ್ತು

(ಬಿ) ಪೆಟ್ರೋಲಿಯಂನ್ನು ಉತ್ಪಾದಿಸಲಾದ, ಸಂಸ್ಕರಿಸಲಾದ ಅಥವಾ ಸಮ್ಮಿಶ್ರಣ ಮಾಡಲಾದ ಆ ಸ್ಥಳಗಳಿಂದ ಅದನ್ನು ಸಾಗಿಸುವುದನ್ನು ವಿನಿಯಮನಗೊಳಿಸಿ ಮತ್ತು ಎ ದರ್ಜೆಯ ಪೆಟ್ರೋಲಿಯಂನ್ನು ಹೊರತುಪಡಿಸಿ, ನಿಯಮಿಸಲಾದ ಪರೀಕ್ಷೆಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸದಿರುವ ಯಾವುದೇ ಪೆಟ್ರೋಲಿಯಂನ್ನು ಆ ಸ್ಥಳಗಳಲ್ಲಿ ದಾಸ್ತಾನು ಮಾಡುವುದನ್ನು ಮತ್ತು ಅಲ್ಲಿಂದ ಸಾಗಿಸುವುದನ್ನು ಪ್ರತಿಬಂಧಿಸಿ

– ನಿಯಮಗಳನ್ನು ರಚಿಸಬಹುದು.

**6. ಪೆಟ್ರೋಲಿಯಂನ ಧಾರಕಗಳು ಎಚ್ಚರಿಕೆಯ ಸೂಚನೆಯನ್ನು ತೋರಿಸುವುದು.–** ಎ ವರ್ಗದ ಪೆಟ್ರೋಲಿಯಂನ್ನು ಒಳಗೊಂಡಿರುವ ಎಲ್ಲಾ ಧಾರಕಗಳು, ಅವುಗಳ ಮೇಲೆಯೇ ಆಗಲಿ ಅಥವಾ ಅದು ಸಾಧ್ಯವಾಗದಿದ್ದಲ್ಲಿ ಧಾರಕದ ಹತ್ತಿರ "ಪೆಟ್ರೋಲು" ಅಥವಾ "ಮೋಟಾರು ಸ್ಪಿರಿಟ್" ಎಂಬ ಎದ್ದುಕಾಣುವ ಪದಗಳನ್ನು ಅಥವಾ ಪೆಟ್ರೋಲಿಯಂನ ಅಪಾಯಕಾರಿ ಸ್ವರೂಪದ ಬಗೆಗೆ ಎಚ್ಚರಿಕೆ ನೀಡುವಂಥ ಸಮಾನ ಪದಗಳನ್ನು ಪ್ರದರ್ಶಿಸಿದ, ಅಚ್ಚೊತ್ತಿದ, ಉಬ್ಬಚ್ಚು ಮಾಡಿದ, ಬಣ್ಣದಿಂದ ಬರೆಯಿಸಿದ ಅಥವಾ ಮುದ್ರಿಸಿದ ಎಚ್ಚರಿಕೆಯನ್ನು ಹೊಂದಿರತಕ್ಕದ್ದು:

ಪರಂತು, ಈ ಪ್ರಕರಣವು,–

(ಎ) ಮಾರಾಟ ಮಾಡುವುದಕ್ಕಲ್ಲದ ಹತ್ತು ಲೀಟರ್ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದ ಯಾವುದೇ ವರ್ಗದ ಪೆಟ್ರೋಲಿಯಂ ಹೊಂದಿರುವ, ಭದ್ರವಾಗಿ ಬಿರಡೆ ಹಾಕಿರುವ ಯಾವುದೇ ಗಾಜಿನ, ಕಲ್ಲಿನ ಅಥವಾ ಲೋಹದ ಧಾರಕಕ್ಕೆ; ಅಥವಾ

(ಬಿ) ಮೋಟಾರು ವಾಹನದಲ್ಲಿ ಅಳವಡಿಸಿದ, ಅಥವಾ ಅಂತರ್ದಹನ ಎಂಜಿನ್ನಿಗೆ ಲಗತ್ತಿಸಿದ ಮತ್ತು ಮೋಟಾರು ವಾಹನಕ್ಕೆ ಅಥವಾ ಎಂಜಿನ್ನಿಗಾಗಿ ಚಾಲಕ ಶಕ್ತಿಯನ್ನು ಉತ್ಪಾದಿಸುವುದಕ್ಕಾಗಿ ಬಳಸಲು ಉದ್ದೇಶಿಸಿದ ಪೆಟ್ರೋಲಿಯಂನ್ನು ಒಳಗೊಂಡಿರುವ ಟ್ಯಾಂಕ್‌ಗೆ; ಅಥವಾ

(ಸಿ) ಪೆಟ್ರೋಲಿಯಂನ್ನು ಸಾಗಿಸುವ ಕೊಳವೆ ಮಾರ್ಗಕ್ಕೆ; ಅಥವಾ

(ಡಿ) ಸಂಪೂರ್ಣವಾಗಿ ನೆಲದ ಅಡಿಯಲ್ಲಿರುವ ಯಾವುದೇ ಟ್ಯಾಂಕ್‌ಗೆ; ಅಥವಾ

(ಇ) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಪ್ರಕರಣದ ವ್ಯಾಪ್ತಿಯಿಂದ ವಿನಾಯಿತಿ ನೀಡಬಹುದಾದ ಯಾವುದೇ ವರ್ಗದ ಧಾರಕಗಳಿಗೆ

– ಅನ್ವಯಿಸತಕ್ಕದ್ದಲ್ಲ.

**7. ಬಿ ವರ್ಗದ ಪೆಟ್ರೋಲಿಯಂನ್ನು ಅಥವಾ ಸಿ ವರ್ಗದ ಪೆಟ್ರೋಲಿಯಂನ್ನು ಸೀಮಿತ ಪ್ರಮಾಣದಲ್ಲಿ ಸಾಗಿಸುವುದಕ್ಕೆ ಅಥವಾ ದಾಸ್ತಾನು ಮಾಡುವುದಕ್ಕೆ ಲೈಸೆನ್ಸಿನ ಅಗತ್ಯವಿರತಕ್ಕದ್ದಲ್ಲ.–** ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ಒಬ್ಬ ವ್ಯಕ್ತಿಯು,–

(i) ಯಾವುದೇ ಒಂದು ಸ್ಥಳದಲ್ಲಿ ತನ್ನ ಸ್ವಾಧೀನದಲ್ಲಿರುವ ಬಿ ವರ್ಗದ ಪೆಟ್ರೋಲಿಯಂನ ಒಟ್ಟು ಪ್ರಮಾಣ ಎರಡು ಸಾವಿರದ ಐದು ನೂರು ಲೀಟರ್‌ಗಳಿಗೆ ಮೀರದಿದ್ದರೆ ಮತ್ತು ಅದರಲ್ಲಿ ಯಾವುದೂ, ಒಂದು ಸಾವಿರ ಲೀಟರ್ ಮೀರಿದ ಸಾಮರ್ಥ್ಯದ ಧಾರಕದಲ್ಲಿ ಒಳಗೊಂಡಿರದಿದ್ದರೆ; ಅಥವಾ

(ii) ಯಾವುದೇ ಒಂದು ಸ್ಥಳದಲ್ಲಿ ತನ್ನ ಸ್ವಾಧೀನದಲ್ಲಿರುವ ಸಿ ವರ್ಗದ ಪೆಟ್ರೋಲಿಯಂನ ಒಟ್ಟು ಪ್ರಮಾಣ ನಲವತ್ತೈದು ಸಾವಿರ ಲೀಟರ್ ಮೀರದಿದ್ದರೆ ಮತ್ತು ಅಂಥ ಪೆಟ್ರೋಲಿಯಂನ್ನು 4ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಅನುಸಾರವಾಗಿ ಸಾಗಣೆ ಮಾಡಿದ್ದರೆ ಅಥವಾ ದಾಸ್ತಾನು ಮಾಡಿದ್ದರೆ

– ಅದನ್ನು ಸಾಗಿಸಲು ಅಥವಾ ದಾಸ್ತಾನು ಮಾಡಲು ಲೈಸೆನ್ಸನ್ನು ಪಡೆಯುವ ಅಗತ್ಯವಿರತಕ್ಕದ್ದಲ್ಲ.

**8. ಎ ವರ್ಗದ ಪೆಟ್ರೋಲಿಯಂನ್ನು ಸಣ್ಣ ಪ್ರಮಾಣಗಳಲ್ಲಿ ಆಮದು ಮಾಡಿಕೊಳ್ಳಲು, ಸಾಗಿಸಲು ಅಥವಾ ದಾಸ್ತಾನು ಮಾಡಲು ಲೈಸೆನ್ಸಿನ ಅಗತ್ಯವಿರತಕ್ಕದ್ದಲ್ಲ.–** (1) ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ಒಬ್ಬ ವ್ಯಕ್ತಿಯು, ತನ್ನ ಸ್ವಾಧೀನದಲ್ಲಿರುವ ಮಾರಾಟ ಮಾಡುವ ಉದ್ದೇಶಕ್ಕಲ್ಲದ ಎ ವರ್ಗದ ಪೆಟ್ರೋಲಿಯಂನ ಒಟ್ಟು ಪ್ರಮಾಣವು ಮೂವತ್ತು ಲೀಟರ್‌ಗಳನ್ನು ಮೀರದಿದ್ದರೆ ಅಂಥ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುವುದಕ್ಕೆ, ಸಾಗಣೆ ಮಾಡುವುದಕ್ಕೆ, ದಾಸ್ತಾನು ಮಾಡುವುದಕ್ಕೆ ಲೈಸೆನ್ಸನ್ನು ಪಡೆಯುವ ಅಗತ್ಯವಿರತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಲೈಸೆನ್ಸ್ ಪಡೆಯದೆ ಸ್ವಾಧೀನದಲ್ಲಿಟ್ಟುಕೊಂಡಿರುವ ಎ ವರ್ಗದ ಪೆಟ್ರೋಲಿಯಂನ್ನು ಭದ್ರವಾಗಿ ಬಿರಡೆ ಹಾಕಿದ ಗಾಜಿನ, ಕಲ್ಲಿನ ಅಥವಾ ಲೋಹದ ಧಾರಕಗಳಲ್ಲಿಟ್ಟಿರತಕ್ಕದ್ದು. ಆ ಧಾರಕಗಳು ಗಾಜಿನ ಅಥವಾ ಕಲ್ಲಿನ ಧಾರಕಗಳ ಸಂದರ್ಭದಲ್ಲಿ ಒಂದು ಲಿಟರ್‌ಗಿಂತ ಹೆಚ್ಚಿನ ಸಂಗ್ರಹಣಾ ಸಾಮರ್ಥ್ಯದವುಗಳು ಆಗಿರತಕ್ಕದ್ದಲ್ಲ ಅಥವಾ ಲೋಹದ ಧಾರಕಗಳ ಸಂದರ್ಭದಲ್ಲಿ ಇಪ್ಪತ್ತೈದು ಲೀಟರ್‌ಗಿಂತ ಹೆಚ್ಚಿನ ಸಂಗ್ರಹಣಾ ಸಾಮರ್ಥ್ಯದವುಗಳು ಆಗಿರತಕ್ಕದ್ದಲ್ಲ.

9. **ಮೋಟಾರು ವಾಹನಗಳಿಗೆ ಮತ್ತು ಸ್ಥಿರ ಎಂಜಿನ್ನುಗಳಿಗೆ ವಿನಾಯಿತಿಗಳು.**–(1) ಮೋಟಾರು ವಾಹನದ ನೋಂದಣಿಗೆ ಮತ್ತು ಅಂಥ ವಾಹನಕ್ಕೆ ಲೈಸೆನ್ಸ್ ನೀಡುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಅಗತ್ಯತೆಗಳನ್ನು ಪಾಲಿಸುವ ಮೋಟಾರು ವಾಹನದ ಒಡೆಯನನ್ನು ಮತ್ತು ಚಾಲಕನನ್ನು ಅಥವಾ ಪೈಲಟ್‌ನನ್ನು ಮತ್ತು ಸ್ಥಿರ ಅಂತರ್ದಹನ ಎಂಜಿನ್ನಿನ ಒಡೆಯನನ್ನು,–

(ಎ) ವಾಹನದಲ್ಲಿಯೇ ಅಳವಡಿಸಿರುವ ಅಥವಾ ಅಂತರ್ದಹನ ಎಂಜಿನ್ನಿಗೆ ಲಗತ್ತಾಗಿರುವ ಯಾವುದೇ ಇಂಧನದ ಟ್ಯಾಂಕ್‌ನಲ್ಲಿ ಒಳಗೊಂಡ ಯಾವುದೇ ಪೆಟ್ರೋಲಿಯಂನ ಆಮದಿಗಾಗಿ, ಸಾಗಣೆಗಾಗಿ ಅಥವಾ ದಾಸ್ತಾನಿಗಾಗಿ; ಅಥವಾ

(ಬಿ) (ಎ) ಖಂಡದ ಮೇರೆಗೆ ಹೊಂದಿರುವ ಯಾವುದೇ ಪ್ರಮಾಣದ ಜೊತೆಗೆ ಒಂದು ನೂರು ಲೀಟರ್ ಪ್ರಮಾಣವನ್ನು ಮೀರದಂಥ ಎ ವರ್ಗದ ಪೆಟ್ರೋಲಿಯಂನ ಸಾಗಣೆಗಾಗಿ ಅಥವಾ ದಾಸ್ತಾನಿಗಾಗಿ, ಪರಂತು, ಆ ಪೆಟ್ರೋಲಿಯಂನ್ನು ಮೋಟಾರು ವಾಹನದ ಅಥವಾ ಇಂಜಿನ್ನಿನ ಚಾಲಕ ಶಕ್ತಿಯ ಉತ್ಪಾದನೆಗೆ ಬಳಸಲು ಉದ್ದೇಶಿಸಿದ್ದರೆ

– ಲೈಸೆನ್ಸು ಪಡೆಯುವಂತೆ ಅಗತ್ಯಪಡಿಸತಕ್ಕದ್ದಲ್ಲ:

ಮತ್ತೂ ಪರಂತು, (ಬಿ) ಖಂಡದ ಮೇರೆಗೆ ಲೈಸೆನ್ಸ್ ಪಡೆಯದೆ ದಾಸ್ತಾನು ಮಾಡಬಹುದಾದ ಎ ವರ್ಗದ ಪೆಟ್ರೋಲಿಯಂನ ಒಟ್ಟು ಪ್ರಮಾಣವು, ಅಂಥ ಒಡೆಯನು ಇತರ ಮೋಟಾರು ವಾಹನ ಅಥವಾ ಇಂಜಿನ್‌ಗಳನ್ನು ಹೊಂದಿದ್ದಾಗ್ಯೂ, ಒಂದು ನೂರು ಲೀಟರುಗಳನ್ನು ಮೀರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಲೈಸೆನ್ಸನ್ನು ಪಡೆಯದೆ ಸಾಗಿಸಿದ ಅಥವಾ ದಾಸ್ತಾನು ಮಾಡಿದ ಎ ವರ್ಗದ ಪೆಟ್ರೋಲಿಯಂನ್ನು 8ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಇಡತಕ್ಕದ್ದು, ಮತ್ತು ಅದು ಮೂವತ್ತು ಲೀಟರ್‌ಗಳ ಪ್ರಮಾಣವನ್ನು ಮೀರಿದರೆ, ಅದನ್ನು ಯಾರೇ ವ್ಯಕ್ತಿಯು ವಾಸಿಸುವ ಅಥವಾ ಕೆಲಸ ಮಾಡುವ ಯಾವುದೇ ಕೊಠಡಿಯೊಂದಿಗೆ ಅಥವಾ ಜನರು ಸೇರುವ ಯಾವುದೇ ಕೊಠಡಿಯೊಂದಿಗೆ ಸಂಪರ್ಕವಿರದ ಒಂದು ಪ್ರತ್ಯೇಕ ಸ್ಥಳದಲ್ಲಿ ದಾಸ್ತಾನು ಮಾಡತಕ್ಕದ್ದು.

10. **ವಾಹಕವಾಗಿ ಕಾರ್ಯನಿರ್ವಹಿಸುತ್ತಿರುವ ರೈಲ್ವೆ ಆಡಳಿತಕ್ಕೆ ಲೈಸೆನ್ಸಿನ ಅಗತ್ಯವಿರುವುದಿಲ್ಲ.**– ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ ಭಾರತೀಯ ರೈಲ್ವೆ ಅಧಿನಿಯಮ, 1890ರ (1890ರ 9) 3ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ರೈಲ್ವೆ ಆಡಳಿತವು ವಾಹಕವಾಗಿ ತನ್ನ ಸಾಮರ್ಥ್ಯದಲ್ಲಿ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುವುದಕ್ಕೆ ಅಥವಾ ಅದರ ಸ್ವಾಧೀನದಲ್ಲಿರುವ ಯಾವುದೇ ಪೆಟ್ರೋಲಿಯಂನ್ನು ಸಾಗಿಸುವುದಕ್ಕೆ ಯಾವುದೇ ಲೈಸೆನ್ಸನ್ನು ಪಡೆಯುವ ಅಗತ್ಯವಿರುವುದಿಲ್ಲ.

11. **ಭಾರ ತೈಲಗಳಿಗೆ ವಿನಾಯಿತಿ.**– ತೊಂಬತ್ಮೂರು ಡಿಗ್ರಿ ಸೆಂಟಿಗ್ರೇಡ್‌ಗಿಂತ ಕಡಿಮೆ ಜ್ವಲನತಾಪ ಹೊಂದಿರುವ ಯಾವುದೇ ಪೆಟ್ರೋಲಿಯಂಗೆ ಈ ಅಧ್ಯಾಯದಲ್ಲಿರುವುದಾವುದೂ ಅನ್ವಯವಾಗತಕ್ಕದ್ದಲ್ಲ.

12. **ವಿನಾಯಿತಿ ನೀಡಲು ಸಾಮಾನ್ಯ ಅಧಿಕಾರ.**– ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪೆಟ್ರೋಲಿಯಂನ್ನು ಈ ಅಧ್ಯಾಯದ ಎಲ್ಲ ಅಥವಾ ಯಾವುದೇ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

13. **ಸ್ಥಳಗಳ ಪರಿಶೀಲನೆ.**– (1) ಕೇಂದ್ರ ಸರ್ಕಾರವು ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳಲಾಗುತ್ತಿರುವ, ದಾಸ್ತಾನು ಮಾಡಲಾಗುತ್ತಿರುವ, ಉತ್ಪಾದಿಸಲಾಗುತ್ತಿರುವ, ಸಂಸ್ಕರಿಸಲಾಗುತ್ತಿರುವ ಅಥವಾ ಸಮ್ಮಿಶ್ರಣ ಮಾಡಲಾಗುತ್ತಿರುವ ಅಥವಾ

ಸಾಗಿಸಲಾಗುತ್ತಿರುವ ಯಾವುದೇ ಸ್ಥಳಕ್ಕೆ ಪ್ರವೇಶಿಸಲು ಮತ್ತು ಈ ಅಧ್ಯಾಯದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅನುಸಾರವಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪೆಟ್ರೋಲಿಯಂನ ಸಂಬಂಧದಲ್ಲಿ ಬಳಸುವ ಎಲ್ಲಾ ಧಾರಕಗಳನ್ನು, ಸ್ಥಾವರವನ್ನು ಮತ್ತು ಉಪಕರಣಗಳನ್ನು ಪರೀಕ್ಷಿಸುವುದಕ್ಕೆ ಯಾರೇ ಅಧಿಕಾರಿಯನ್ನು ಹೆಸರಿನ ಮೂಲಕ ಅಥವಾ ಪದದ ಬಲದಿಂದ ಅಧಿಕೃತಗೊಳಿಸಬಹುದು.

(2) ಕೇಂದ್ರ ಸರ್ಕಾರವು, ಈ ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಗಳ ಕಾರ್ಯವಿಧಾನಗಳನ್ನು ವಿನಿಯಮನಗೊಳಿಸಿ ನಿಯಮಗಳನ್ನು ರಚಿಸಬಹುದು.

## ಅಧ್ಯಾಯ – II

## ಪೆಟ್ರೋಲಿಯಂನ್ನು ಪರೀಕ್ಷಿಸುವುದು

14. **ಪೆಟ್ರೋಲಿಯಂನ ತಪಾಸಣೆ ಮತ್ತು ಮಾದರಿ ತೆಗೆದುಕೊಳ್ಳುವುದು.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳಲಾಗುತ್ತಿರುವ, ಸಾಗಣೆ ಮಾಡಲಾಗುತ್ತಿರುವ, ದಾಸ್ತಾನು ಮಾಡಲಾಗುತ್ತಿರುವ, ಉತ್ಪಾದಿಸುತ್ತಿರುವ, ಸಂಸ್ಕರಿಸಲಾಗುತ್ತಿರುವ ಅಥವಾ ಸಮ್ಮಿಶ್ರಣ ಮಾಡಲಾಗುತ್ತಿರುವ ಯಾವುದೇ ಸ್ಥಳವನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಮತ್ತು ಪರೀಕ್ಷೆಗಾಗಿ ಅಲ್ಲಿ ದೊರೆಯುವ ಯಾವುದೇ ಪೆಟ್ರೋಲಿಯಂನ ಮಾದರಿಗಳನ್ನು ತೆಗೆದುಕೊಳ್ಳಲು ಯಾರೇ ಅಧಿಕಾರಿಯನ್ನು ಅವನ ಹೆಸರಿನ ಮೂಲಕವಾಗಲಿ ಅಥವಾ ಪದದ ಬಲದಿಂದಾಗಲಿ ಅಧಿಕೃತಗೊಳಿಸಬಹುದು.

(2) ಕೇಂದ್ರ ಸರ್ಕಾರವು,–

(ಎ) ಪರೀಕ್ಷೆಗಾಗಿ ಪೆಟ್ರೋಲಿಯಂನ ಮಾದರಿಗಳನ್ನು ತೆಗೆದುಕೊಳ್ಳುವುದನ್ನು ವಿನಿಯಮನಗೊಳಿಸಿ;

(ಬಿ) ಹಾಗೆ ತೆಗೆದುಕೊಳ್ಳಲಾದ ಮಾದರಿಗಳ ಮೌಲ್ಯಕ್ಕೆ ಯಾವ ಪ್ರಕರಣಗಳಲ್ಲಿ ಹಣ ಸಂದಾಯ ಮಾಡತಕ್ಕದ್ದೋ ಆ ಪ್ರಕರಣಗಳನ್ನು ಮತ್ತು ಸಂದಾಯದ ರೀತಿಯನ್ನು ನಿರ್ಧರಿಸಿ; ಮತ್ತು

(ಸಿ) ಸಾಮಾನ್ಯವಾಗಿ, ಈ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ಅಧಿಕಾರಿಗಳ ಕಾರ್ಯವಿಧಾನವನ್ನು ವಿನಿಯಮನಗೊಳಿಸಿ

– ನಿಯಮಗಳನ್ನು ರಚಿಸಬಹುದು.

15. **ಗುಣಮಟ್ಟ ಪರೀಕ್ಷಾ ಸಲಕರಣೆ.**– (1) ಪೆಟ್ರೋಲಿಯಂನ ಜ್ವಲನತಾಪವನ್ನು ನಿರ್ಧರಿಸುವುದಕ್ಕಾಗಿ ಇರುವ ಗುಣಮಟ್ಟ ಸಲಕರಣೆಯನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ಈ ಸಂಬಂಧ ನೇಮಕ ಮಾಡುವ ಅಧಿಕಾರಿಯ ಬಳಿ ಇಡತಕ್ಕದ್ದು.

(2) ಅಂಥ ಸಲಕರಣೆಯ ಮೇಲೆ "ಗುಣಮಟ್ಟ ಪರೀಕ್ಷಾ ಸಲಕರಣೆ" ಎಂಬ ಪದಗಳನ್ನು ಕೆತ್ತಿರತಕ್ಕದ್ದು ಮತ್ತು 21ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಅನುಸಾರವಾಗಿ ಅದನ್ನು ಕಾಲಕಾಲಕ್ಕೆ ಪರಿಶೀಲಿಸತಕ್ಕದ್ದು ಮತ್ತು ಸರಿಪಡಿಸತಕ್ಕದ್ದು ಮತ್ತು ಅವಶ್ಯವಿದ್ದಾಗ ಅದನ್ನು ಬದಲಾಯಿಸತಕ್ಕದ್ದು.

(3) ಗುಣಮಟ್ಟ ಪರೀಕ್ಷಾ ಸಲಕರಣೆಯನ್ನು ಪರಿವೀಕ್ಷಿಸಲು ಯಾರೇ ವ್ಯಕ್ತಿಯು ಇಚ್ಛಿಸಿದಲ್ಲಿ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ಮೇಲೆ ಎಲ್ಲ ಸೂಕ್ತ ಸಮಯಗಳಲ್ಲಿ ಅದರ ಪರಿಶೀಲನೆಗೆ, ಅವನಿಗೆ ಮುಕ್ತ ಅವಕಾಶ ನೀಡತಕ್ಕದ್ದು.

16. **ಇತರ ಪರೀಕ್ಷಾ ಸಲಕರಣೆಗಳ ಪ್ರಮಾಣೀಕರಣ.**– (1) 15ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಯು, ನಿಯಮಿಸಲಾದ ಫೀಜು ಯಾವುದಾದರು ಇದ್ದರೆ, ಅದನ್ನು ಸಂದಾಯ ಮಾಡಿದ ಮೇಲೆ, ಪೆಟ್ರೋಲಿಯಂನ ಜ್ವಲನತಾಪವನ್ನು ನಿರ್ಧರಿಸುವುದಕ್ಕಾಗಿ, ಈ ಉದ್ದೇಶಕ್ಕಾಗಿ ಅವನಿಗೆ ಒಪ್ಪಿಸಬಹುದಾದ ಯಾವುದೇ ಸಲಕರಣೆಯನ್ನು ಮಾನಕ ಪರೀಕ್ಷಾ ಸಲಕರಣೆಯೊಂದಿಗೆ ಹೋಲಿಸಿ ನೋಡತಕ್ಕದ್ದು.

(2) ಯಾವುದೇ ಸಲಕರಣೆಯು ನಿಯಮಿಸಿದ ಪರಿಮಿತಿಗಳೊಳಗೆ ಗುಣಮಟ್ಟ ಪರೀಕ್ಷಾ ಸಲಕರಣೆಯೊಂದಿಗೆ ಸರಿಹೊಂದುತ್ತದೆ ಎಂದು ಅವನಿಗೆ ಕಂಡುಬಂದರೆ, ಆ ಅಧಿಕಾರಿಯು ಅಂಥ ಸಲಕರಣೆಯ ಮೇಲೆ ಒಂದು ವಿಶೇಷ ಸಂಖ್ಯೆಯನ್ನು ಮತ್ತು ಹೋಲಿಸಿ ನೋಡಿದ ದಿನಾಂಕವನ್ನು ಕೆತ್ತತಕ್ಕದ್ದು ಮತ್ತು ಗುಣಮಟ್ಟ ಪರೀಕ್ಷಾ ಸಲಕರಣೆಯೊಂದಿಗೆ ಆ ಸಲಕರಣೆಯನ್ನು ಹೋಲಿಸಿ ಸದರಿ ದಿನಾಂಕದಂದು ಹೋಲಿಸಿ ನೋಡಲಾಯಿತು ಮತ್ತು ನಿಯಮಿಸಲಾದ ಪರಿಮಿತಿಗಳೊಳಗೆ ಅದಕ್ಕೆ ಸರಿಹೊಂದುತ್ತದೆ ಎಂದು ಪ್ರಮಾಣೀಕರಿಸಿ ಮತ್ತು ಸಲಕರಣೆ ಬಗ್ಗೆ ನಡೆಸಿದ ಪರೀಕ್ಷೆಗಳ ಫಲಿತಾಂಶಗಳಲ್ಲಿ ಮಾಡಬೇಕಾದ ಯಾವುವೇ ತಿದ್ದುಪಾಟುಗಳನ್ನು ನಿರ್ದಿಷ್ಟಪಡಿಸಿ ನಿಯಮಿಸಿದ ನಮೂನೆಯಲ್ಲಿ ಅದಕ್ಕೆ ಸಂಬಂಧಿಸಿದಂತೆ ಪ್ರಮಾಣೀಕರಿಸಿ ಒಂದು ಪ್ರಮಾಣಪತ್ರವನ್ನು ನೀಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀಡಲಾದ ಪ್ರಮಾಣಪತ್ರವು ನಿಯಮಿಸಬಹುದಾದಂಥ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ನೀಡಲಾದ ಪ್ರಮಾಣಪತ್ರವು, ಅದು ಸಿಂಧುವಾಗಿರುವ ಅವಧಿಯಲ್ಲಿ, ತದ್ವಿರುದ್ಧವಾದುದು ರುಜುವಾತಾಗುವವರೆಗೆ ಅದರಲ್ಲಿ ಹೇಳಿರುವ ಯಾವುದೇ ವಿಷಯದ ಬಗ್ಗೆ ರುಜುವಾತಾಗಿರತಕ್ಕದ್ದು.

(5) ಅಧಿಕಾರಿಯು, ಈ ಪ್ರಕರಣದ ಮೇರೆಗೆ ತಾನು ನೀಡಿದ ಎಲ್ಲ ಪ್ರಮಾಣಪತ್ರಗಳ ಬಗ್ಗೆ ನಿಯಮಿಸಲಾದ ನಮೂನೆಯಲ್ಲಿ ಒಂದು ರಿಜಿಸ್ಟರನ್ನು ಇಡತಕ್ಕದ್ದು.

**17. ಪರೀಕ್ಷಿಸುವ ಅಧಿಕಾರಿಗಳು.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಯಾವ ಪೆಟ್ರೋಲಿಯಂನ ಮಾದರಿಗಳನ್ನು ತೆಗೆದುಕೊಳ್ಳಲಾಗಿದೆಯೋ ಅಂಥ ಪೆಟ್ರೋಲಿಯಂನ ಅಥವಾ ಯಾರೇ ವ್ಯಕ್ತಿಯು ಪರೀಕ್ಷೆಗಾಗಿ ತನಗೆ ಸಲ್ಲಿಸಬಹುದಾದಂಥ ಪೆಟ್ರೋಲಿಯಂನ್ನು ಪರೀಕ್ಷಿಸುವುದಕ್ಕೆ, ಮತ್ತು ಅಂಥ ಪರೀಕ್ಷೆಗಳ ಫಲಿತಾಂಶಗಳ ಬಗ್ಗೆ ಪ್ರಮಾಣ ಪತ್ರಗಳನ್ನು ನೀಡುವುದಕ್ಕೆ ಯಾರೇ ಅಧಿಕಾರಿಯನ್ನು ಹೆಸರಿನ ಮೂಲಕ ಅಥವಾ ಪದದ ಬಲದಿಂದ ಅಧಿಕೃತಗೊಳಿಸಬಹುದು.

**18. ಪರೀಕ್ಷಿಸುವ ರೀತಿ.–** ಈ ಅಧಿನಿಯಮದ ಮೇರೆಗೆ ಮಾಡಿದ ಪೆಟ್ರೋಲಿಯಂನ ಎಲ್ಲ ಪರೀಕ್ಷೆಗಳನ್ನು 16ನೇ ಪ್ರಕರಣದ ಮೇರೆಗೆ ಸಿಂಧುವಾದ ಪ್ರಮಾಣ ಪತ್ರ ಹೊಂದಿರುವ ಪರೀಕ್ಷಾ ಸಲಕರಣೆಯನ್ನು ಬಳಸಿ ಆ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಸರಿಪಡಿಸುವಿಕೆಗೆ ಯುಕ್ತ ಗಮನ ನೀಡಿ ಮಾಡತಕ್ಕದ್ದು ಮತ್ತು 21ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಅನುಸಾರವಾಗಿ ನಡೆಸತಕ್ಕದ್ದು.

**19. ಪರೀಕ್ಷಾ ಪ್ರಮಾಣಪತ್ರ.–**(1) ಪೆಟ್ರೋಲಿಯಂ ಮಾದರಿಗಳನ್ನು ಪರೀಕ್ಷಿಸಿದ ನಂತರ ಪರೀಕ್ಷಿಸಿದ ಅಧಿಕಾರಿಯು ಆ ಪೆಟ್ರೋಲಿಯಂ ಎ ವರ್ಗದ ಪೆಟ್ರೋಲಿಯಂ ಆಗಿದೆಯೇ ಅಥವಾ ಬಿ ವರ್ಗದ ಪೆಟ್ರೋಲಿಯಂ ಆಗಿದೆಯೇ ಅಥವಾ ಸಿ ವರ್ಗದ ಪೆಟ್ರೋಲಿಯಂ ಆಗಿದೆಯೇ ಎಂಬುದನ್ನು ಮತ್ತು ಆ ಪೆಟ್ರೋಲಿಯಂ ಬಿ ವರ್ಗದ ಪೆಟ್ರೋಲಿಯಂ ಅಥವಾ ಸಿ ವರ್ಗದ ಪೆಟ್ರೋಲಿಯಂ ಆಗಿದ್ದರೆ ಅಂಥ ಪೆಟ್ರೋಲಿಯಂನ ಜ್ವಲನತಾಪವನ್ನು ತಿಳಿಸಿ ನಿಯಮಿಸಲಾದ ನಮೂನೆಯಲ್ಲಿ ಒಂದು ಪ್ರಮಾಣಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಪರೀಕ್ಷಿಸುವ ಅಧಿಕಾರಿಯು, ಸಂಬಂಧಿಸಿದ ವ್ಯಕ್ತಿಯ ಕೋರಿಕೆಯ ಮೇಲೆ, ನಿಯಮಿಸಲಾದ ಫೀಜನ್ನು ಆತ ಸಂದಾಯ ಮಾಡಿದ ನಂತರ ಪ್ರಮಾಣಪತ್ರದ ಪ್ರಮಾಣಿತ ಪ್ರತಿಯನ್ನು ಒದಗಿಸತಕ್ಕದ್ದು, ಮತ್ತು ಅಂಥ ಪ್ರಮಾಣಿತ ಪ್ರತಿಯನ್ನು ಯಾವುದೇ ನ್ಯಾಯಾಲಯದಲ್ಲಿ ಮೂಲ ಪ್ರಮಾಣಪತ್ರದ ಒಳಾಂಶಗಳ ರುಜುವಾತಾಗಿ ಹಾಜರುಪಡಿಸಬಹುದು.

(3) ಈ ಪ್ರಕರಣದ ಮೇರೆಗೆ ನೀಡಲಾದ ಪ್ರಮಾಣಪತ್ರವನ್ನು ಯಾವ ಪೆಟ್ರೋಲಿಯಂನಿಂದ ಮಾದರಿಗಳನ್ನು ತೆಗೆದುಕೊಳ್ಳಲಾಗಿತ್ತೋ ಆ ಪೆಟ್ರೋಲಿಯಂನ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಕೈಗೊಳ್ಳಬಹುದಾದ ಯಾವುದೇ ವ್ಯವಹರಣೆಗಳ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು, ಮತ್ತು ತದ್ವಿರುದ್ಧವಾದುದು ರುಜುವಾತಾಗುವವರೆಗೆ, ಅದು, ಆ ಪೆಟ್ರೋಲಿಯಂ ಎ ವರ್ಗದ ಪೆಟ್ರೋಲಿಯಂ ಅಥವಾ ಬಿ ವರ್ಗದ ಪೆಟ್ರೋಲಿಯಂ ಅಥವಾ ಸಿ ವರ್ಗದ ಪೆಟ್ರೋಲಿಯಂ ಆಗಿದೆ ಎಂಬುದರ ಮತ್ತು ಆ ಪೆಟ್ರೋಲಿಯಂ ಬಿ ವರ್ಗದ ಪೆಟ್ರೋಲಿಯಂ ಅಥವಾ ಸಿ ವರ್ಗದ ಪೆಟ್ರೋಲಿಯಂ ಆಗಿದ್ದರೆ ಅದರ ಜ್ವಲನತಾಪದ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕದ್ದು.

**20. ಮರು ಪರೀಕ್ಷೆಗೆ ಅಗತ್ಯಪಡಿಸುವ ಹಕ್ಕು.**– (1) ಪೆಟ್ರೋಲಿಯಂನ ಪರೀಕ್ಷೆಯ ಫಲಿತಾಂಶದ ಬಗ್ಗೆ ಅತೃಪ್ತಿ ಹೊಂದಿರುವ ಯಾರೇ ಪೆಟ್ರೋಲಿಯಂನ ಒಡೆಯ ಅಥವಾ ಅವನ ಏಜೆಂಟನು ಪರೀಕ್ಷೆಯ ಫಲಿತಾಂಶವು ತಲುಪಿದ ದಿನಾಂಕದಿಂದ ಏಳು ದಿನಗಳೊಳಗಾಗಿ, ಅವನು ಪೆಟ್ರೋಲಿಯಂನ ಹೊಸ ಮಾದರಿಗಳನ್ನು ತೆಗೆದುಕೊಂಡು ಪರೀಕ್ಷಿಸುವಂತೆ ಕೋರಿ 14ನೇ ಪ್ರಕರಣದ ಮೇರೆಗೆ ಅಧಿಕೃತನಾದ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು.

(2) ಅಂಥ ಅರ್ಜಿಯ ಮೇಲೆ ಮತ್ತು ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ಮೇಲೆ, ಅಂಥ ಒಡೆಯನ ಅಥವಾ ಏಜಂಟನ ಅಥವಾ ಅವನಿಂದ ಪ್ರತಿನಿಯೋಜಿತನಾದ ವ್ಯಕ್ತಿಯ ಸಮಕ್ಷಮದಲ್ಲಿ ಪೆಟ್ರೋಲಿಯಂನ ಹೊಸ ಮಾದರಿಗಳನ್ನು ತೆಗೆದುಕೊಳ್ಳತಕ್ಕದ್ದು, ಮತ್ತು ಅಂಥ ಒಡೆಯನ, ಏಜಂಟನ ಅಥವಾ ಅವನಿಂದ ಪ್ರತಿನಿಯೋಜಿತನಾದ ವ್ಯಕ್ತಿಯ ಸಮಕ್ಷಮದಲ್ಲಿ ಅದನ್ನು ಪರೀಕ್ಷಿಸತಕ್ಕದ್ದು.

(3) ಹಾಗೆ ಮರುಪರೀಕ್ಷೆ ಮಾಡಿದ ಮೇಲೆ, ಮೂಲ ಪರೀಕ್ಷೆಯು ದೋಷಯುಕ್ತವಾಗಿದೆಯೆಂದು ಕಂಡುಬಂದರೆ, ಪರೀಕ್ಷಿಸುವ ಅಧಿಕಾರಿಯು, 19ನೇ ಪ್ರಕರಣದ ಮೇರೆಗೆ ನೀಡಲಾಗಿದ್ದ ಮೂಲ ಪ್ರಮಾಣಪತ್ರವನ್ನು ರದ್ದುಗೊಳಿಸತಕ್ಕದ್ದು ಹಾಗೂ ಒಂದು ಹೊಸ ಪ್ರಮಾಣಪತ್ರವನ್ನು ಸಿದ್ಧಪಡಿಸಿ ಅದರ ಪ್ರಮಾಣೀಕೃತ ಪ್ರತಿಯನ್ನು ಉಚಿತವಾಗಿ ಪೆಟ್ರೋಲಿಯಂನ ಒಡೆಯನಿಗೆ ಅಥವಾ ಅವನ ಏಜಂಟನಿಗೆ ಒದಗಿಸತಕ್ಕದ್ದು.

**21. ಪರೀಕ್ಷೆಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ಅಧಿಕಾರ.**– ಕೇಂದ್ರ ಸರ್ಕಾರವು,–

(ಎ) ಗುಣಮಟ್ಟ ಪರೀಕ್ಷಾ ಸಲಕರಣೆಯ ವಿಶಿಷ್ಟ ವಿವರಣೆಗಾಗಿ, ಪರಿಶೀಲನೆಗಾಗಿ, ಸರಿಪಡಿಸುವಿಕೆಗಾಗಿ ಮತ್ತು ಬದಲಾವಣೆಗಾಗಿ;

(ಬಿ) ಗುಣಮಟ್ಟ ಪರೀಕ್ಷಾ ಸಲಕರಣೆಯ ತಪಾಸಣೆಗೆ ಫೀಜನ್ನು ನಿಯಮಿಸಿ;

(ಸಿ) ಗುಣಮಟ್ಟ ಪರೀಕ್ಷಾ ಸಲಕರಣೆಯೊಂದಿಗೆ ಪರೀಕ್ಷಾ ಸಲಕರಣೆಯನ್ನು ಹೋಲಿಸಿ ನೋಡುವ ಕಾರ್ಯವಿಧಾನವನ್ನು ವಿನಿಯಮನಗೊಳಿಸಿ;

(ಡಿ) ಹಾಗೆ ಹೋಲಿಸಿ ನೋಡಲಾದ ಪರೀಕ್ಷಾ ಸಲಕರಣೆಯ ಸಂಬಂಧದಲ್ಲಿ ನೀಡಲಾಗುವ ಪ್ರಮಾಣಪತ್ರದ ನಮೂನೆಯನ್ನು ಮತ್ತು ಅಂಥ ಪ್ರಮಾಣಪತ್ರಗಳು ಸಿಂಧುವಾಗಿರತಕ್ಕ ಅವಧಿಯನ್ನು ನಿಯಮಿಸಿ;

(ಇ) ಅಂಥ ಪ್ರಮಾಣಪತ್ರಗಳ ರಿಜಿಸ್ಟರಿನ ನಮೂನೆಯನ್ನು ನಿಯಮಿಸಿ;

(ಎಫ್) ಗುಣಮಟ್ಟ ಪರೀಕ್ಷಾ ಸಲಕರಣೆಯೊಂದಿಗೆ ಪರೀಕ್ಷಾ ಸಲಕರಣೆಯನ್ನು ಹೋಲಿಸಿ ನೋಡುವುದಕ್ಕಾಗಿ ಫೀಜುಗಳನ್ನು ನಿಯಮಿಸಿ;

(ಜಿ) ಪೆಟ್ರೋಲಿಯಂನ ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ಪರೀಕ್ಷಿಸುವ ಅಧಿಕಾರಿಗಳ ಕಾರ್ಯವಿಧಾನವನ್ನು ವಿನಿಯಮನಗೊಳಿಸಿ, ಒಂದೇ ಪೆಟ್ರೋಲಿಯಂನ ಅನೇಕ ಮಾದರಿಗಳನ್ನು ಪರೀಕ್ಷೆ ಮಾಡಿರುವಲ್ಲಿ ಫಲಿತಾಂಶಗಳ ಸರಾಸರಿ ತೆಗೆಯುವುದಕ್ಕೆ ಅವಕಾಶ ಕಲ್ಪಿಸಿ ಮತ್ತು ಗುಣಮಟ್ಟ ಉಷ್ಣಾಂಶಗಳಲ್ಲಿ ಉಂಟಾಗುವ, ಅನುಮತಿಸಬಹುದಾದ ವ್ಯತ್ಯಾಸಗಳನ್ನು ನಿಯಮಿಸಿ;

(ಹೆಚ್) ಪೆಟ್ರೋಲಿಯಂನ ಪರೀಕ್ಷಾ ಪ್ರಮಾಣಪತ್ರಗಳ ನಮೂನೆಯನ್ನು ಮತ್ತು ಅದಕ್ಕೆ ವಿಧಿಸಬಹುದಾದ ಫೀಜುಗಳನ್ನು ನಿಯಮಿಸಿ;

(ಐ) ಪರೀಕ್ಷೆ ಮಾಡುತ್ತಿರುವ ಯಾವುದೇ ಜಾಗದಲ್ಲಿನ ಪೆಟ್ರೋಲಿಯಂನ ಗುಣಮಟ್ಟದ ಏಕರೂಪತೆಯ ಬಗ್ಗೆ, ಮಾದರಿಗಳ ಪರೀಕ್ಷಾ ಫಲಿತಾಂಶಗಳ ಬಗ್ಗೆ ಸಂದೇಹ ಉಂಟಾದಲ್ಲಿ ಭಾಗಗಳನ್ನು ಉಪಭಾಗಗಳನ್ನಾಗಿ ವಿಭಾಗಿಸಲು ಮತ್ತು ಪ್ರತಿಯೊಂದು ಉಪಭಾಗದ ಮಾದರಿಗಳ ಆಯ್ಕೆಗೆ ಮತ್ತು ಪರೀಕ್ಷೆಗೆ ಹಾಗೂ ಆ ಮಾದರಿಗಳ ಪರೀಕ್ಷೆಯ ಫಲಿತಾಂಶಗಳ ಅನುಸಾರವಾಗಿ ಫಲಿತಾಂಶಗಳ ಸರಾಸರಿ ತೆಗೆಯುವುದಕ್ಕೆ ಅವಕಾಶ ಕಲ್ಪಿಸಿ;

(ಜೆ) 20ನೇ ಪ್ರಕರಣದ ಮೇರೆಗೆ ಮರುಪರೀಕ್ಷೆಗಳಿಗಾಗಿ ಫೀಜುಗಳನ್ನು ನಿಯಮಿಸಿ ಮತ್ತು ಮೂಲ ಪರೀಕ್ಷೆಯು ತಪ್ಪಾಗಿದ್ದಾಗ ಆ ಫೀಜಿನ ಮರುಪಾವತಿಗೆ ಅವಕಾಶ ಕಲ್ಪಿಸಿ; ಮತ್ತು

(ಕೆ) ಸಾಮಾನ್ಯವಾಗಿ ಪೆಟ್ರೋಲಿಯಂನ ಪರೀಕ್ಷೆಗೆ ಸಂಬಂಧಿಸಿದಂತೆ ಕರ್ತವ್ಯ ನಿರ್ವಹಿಸುವ ಎಲ್ಲಾ ಅಧಿಕಾರಿಗಳ ಕಾರ್ಯವಿಧಾನವನ್ನು ವಿನಿಯಮನಗೊಳಿಸಿ ಮತ್ತು ಅಂಥ ಪರೀಕ್ಷೆಗೆ ಪ್ರಾಸಂಗಿಕವಾದ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಿ

– ನಿಯಮಗಳನ್ನು ರಚಿಸಬಹುದು.

**22. ಜಿಗುಟು ಅಥವಾ ಘನರೂಪದಲ್ಲಿರುವ ಪೆಟ್ರೋಲಿಯಂನ್ನು ಪರೀಕ್ಷಿಸುವುದಕ್ಕಾಗಿ ವಿಶೇಷ ನಿಯಮಗಳು.–** ಕೇಂದ್ರ ಸರ್ಕಾರವು, ಜಿಗುಟು ಅಥವಾ ಘನರೂಪ ಅಥವಾ ಗಸಿಯನ್ನೊಳಗೊಂಡ ಅಥವಾ ಮಂದಗೊಳಿಸುವ ಘಟಕಾಂಶಗಳನ್ನು ಒಳಗೊಂಡಿರುವಂಥ ಯಾವುದೇ ರೂಪದ ಪೆಟ್ರೋಲಿಯಂನ್ನು ಪರೀಕ್ಷಿಸುವುದಕ್ಕಾಗಿ ವಿಶೇಷವಾಗಿ ಉಪಬಂಧ ಕಲ್ಪಿಸುವ ನಿಯಮಗಳನ್ನು ಸಹ ರಚಿಸಬಹುದು, ಮತ್ತು ಅಂಥ ಪರೀಕ್ಷೆಗಳ ವಿಶೇಷ ಅಗತ್ಯಗಳಿಗೆ ಅವುಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಅಂಥ ನಿಯಮಗಳನ್ನು ಮಾರ್ಪಾಟು ಮಾಡಬಹುದು ಅಥವಾ ಈ ಅಧ್ಯಾಯದ ಅಥವಾ 21ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಉಪಬಂಧಗಳನ್ನು ಅಂಥ ನಿಯಮಗಳಿಗೆ ಪೂರಕವಾಗಿ ಸೇರಿಸಬಹುದು.

## ಅಧ್ಯಾಯ – III

## ದಂಡನೆಗಳು ಮತ್ತು ಕಾರ್ಯವಿಧಾನ

**23. ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗೆ ಸಾಮಾನ್ಯ ದಂಡನೆ.–** (1) ಯಾರೇ ಆಗಲಿ,–

(ಎ) Iನೇ ಅಧ್ಯಾಯದ ಉಪಬಂಧಗಳಲ್ಲಿ ಯಾವುದನ್ನಾದರೂ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿ ಯಾವುದೇ ಪೆಟ್ರೋಲಿಯಂನ್ನು ಆಮದು ಮಾಡಿಕೊಂಡಲ್ಲಿ, ಸಾಗಣೆ ಮಾಡಿದಲ್ಲಿ, ದಾಸ್ತಾನು ಮಾಡಿದಲ್ಲಿ, ಉತ್ಪಾದನೆ ಮಾಡಿದಲ್ಲಿ, ಸಂಸ್ಕರಣ ಮಾಡಿದಲ್ಲಿ ಅಥವಾ ಸಮ್ಮಿಶ್ರಣ ಮಾಡಿದಲ್ಲಿ; ಅಥವಾ

(ಬಿ) 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿದಲ್ಲಿ; ಅಥವಾ

(ಸಿ) 4ನೇ ಪ್ರಕರಣದ ಮೇರೆಗೆ ನೀಡಿದ ಲೈಸೆನ್ಸ್ ಧಾರಕನಾಗಿ ಅಥವಾ ಅಂಥ ಲೈಸೆನ್ಸಿನ ಧಾರಕನು ತತ್ಕಾಲದಲ್ಲಿ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳಲಾಗುತ್ತಿರುವಂಥ ಅಥವಾ ದಾಸ್ತಾನು ಮಾಡಲಾಗುತ್ತಿರುವಂಥ ಅಥವಾ ಸಾಗಣೆ ಮಾಡುತ್ತಿರುವಂಥ ಯಾವುದೇ ಸ್ಥಳದ ನಿಯಂತ್ರಣದಲ್ಲಿ ಅಥವಾ ಪ್ರಭಾರದಲ್ಲಿ ಇರಿಸಿರುವ ವ್ಯಕ್ತಿಯಾಗಿ ಅಂಥ ಲೈಸೆನ್ಸಿನ ಯಾವುವೇ ಷರತ್ತನ್ನು ಉಲ್ಲಂಘಿಸಿದಲ್ಲಿ ಅಥವಾ ಅಂಥ ಲೈಸೆನ್ಸಿನ ಯಾವುವೇ ಷರತ್ತುಗಳ ಉಲ್ಲಂಘನೆಗೆ ಕಾರಣನಾದಲ್ಲಿ; ಅಥವಾ

(ಡಿ) ತತ್ಕಾಲದಲ್ಲಿ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುತ್ತಿರುವಂಥ, ದಾಸ್ತಾನು ಮಾಡುತ್ತಿರುವಂಥ, ಉತ್ಪಾದಿಸುತ್ತಿರುವಂಥ, ಸಂಸ್ಕರಿಸುತ್ತಿರುವಂಥ ಅಥವಾ ಸಮ್ಮಿಶ್ರಣ ಮಾಡುತ್ತಿರುವಂಥ ಅಥವಾ ಸಾಗಣೆ ಮಾಡುತ್ತಿರುವಂಥ ಯಾವುದೇ ಸ್ಥಳದ ನಿಯಂತ್ರಣದಲ್ಲಿದ್ದು ಅಥವಾ ಪ್ರಭಾರದಲ್ಲಿದ್ದು ಪೆಟ್ರೋಲಿಯಂನ ಸಂಬಂಧದಲ್ಲಿ ಅಂಥ ಸ್ಥಳದಲ್ಲಿ ಬಳಸುವ ಯಾವುದೇ ಧಾರಕವನ್ನು, ಸ್ಥಾವರವನ್ನು ಅಥವಾ ಉಪಕರಣವನ್ನು 13ನೇ ಪ್ರಕರಣದ ಮೇರೆಗೆ ಅಧಿಕೃತಗೊಂಡ ಯಾರೇ ಅಧಿಕಾರಿಗೆ ತೋರಿಸಲು ನಿರಾಕರಿಸಿದರೆ ಅಥವಾ ಉಪೇಕ್ಷಿಸಿದರೆ ಅಥವಾ ತಪಾಸಣೆಯ ಸಮಯದಲ್ಲಿ ಅಂಥ ಅಧಿಕಾರಿಗೆ ಸೂಕ್ತ ನೆರವು ನೀಡಲು ಯಾವುದೇ ರೀತಿಯಲ್ಲಿ ಅಡ್ಡಿಯುಂಟು ಮಾಡಿದಲ್ಲಿ ಅಥವಾ ವಿಫಲನಾದಲ್ಲಿ; ಅಥವಾ

(ಇ) ತತ್ಕಾಲದಲ್ಲಿ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುತ್ತಿರುವಂಥ, ಸಾಗಣೆ ಮಾಡುತ್ತಿರುವಂಥ, ದಾಸ್ತಾನು ಮಾಡುತ್ತಿರುವಂಥ, ಉತ್ಪಾದಿಸುತ್ತಿರುವಂಥ, ಸಂಸ್ಕರಿಸುತ್ತಿರುವಂಥ ಅಥವಾ ಸಂಮಿಶ್ರಣ ಮಾಡುತ್ತಿರುವಂಥ ಯಾವುದೇ ಸ್ಥಳದ ನಿಯಂತ್ರಣದಲ್ಲಿದ್ದು ಅಥವಾ ಪ್ರಭಾರದಲ್ಲಿದ್ದು ಅಂಥ ಸ್ಥಳದಲ್ಲಿರುವ ಯಾವುದೇ ಪೆಟ್ರೋಲಿಯಂನ್ನು 14ನೇ ಪ್ರಕರಣದ ಮೇರೆಗೆ ಅಧಿಕೃತಗೊಂಡ ಯಾರೇ ಅಧಿಕಾರಿಗೆ ತೋರಿಸಲು ನಿರಾಕರಿಸಿದಲ್ಲಿ ಅಥವಾ ಉಪೇಕ್ಷಿಸಿದಲ್ಲಿ ಅಥವಾ ಅಂಥ ಪೆಟ್ರೋಲಿಯಂನ ತಪಾಸಣೆಗೆ ಅವನು ಅಗತ್ಯಪಡಿಸಬಹುದಾದಂಥ ನೆರವು ನೀಡುವುದಕ್ಕೆ ಅಥವಾ ಪೆಟ್ರೋಲಿಯಂನ ಮಾದರಿಗಳನ್ನು ತೆಗೆದುಕೊಳ್ಳಲು ಅವನಿಗೆ ಅವಕಾಶ ನೀಡಲು ನಿರಾಕರಿಸಿದಲ್ಲಿ; ಅಥವಾ

(ಎಫ್) 27ನೇ ಪ್ರಕರಣದ ಮೇರೆಗೆ ಅಪಘಾತದ ಮಾಹಿತಿಯನ್ನು ನೀಡಲು ಅಗತ್ಯಪಡಿಸಿದ್ದು, ಆ ಪ್ರಕರಣದ ಮೂಲಕ ಹಾಗೆ ಅಗತ್ಯಪಡಿಸಲಾದಂಥ ಮಾಹಿತಿಯನ್ನು ನೀಡಲು ವಿಫಲನಾದಲ್ಲಿ –

– ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದು, ಆ ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಪುನಃ ತಪ್ಪಿತಸ್ಥನಾದರೆ, ಅವನು ಆ ತರುವಾಯದ ಅಂಥ ಪ್ರತಿಯೊಂದು ಅಪರಾಧಕ್ಕೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**24. ಪೆಟ್ರೋಲಿಯಂನ ಮತ್ತು ಧಾರಕಗಳ ಮುಟ್ಟುಗೋಲು.**– (1) 23ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡ ಅಥವಾ (ಬಿ) ಖಂಡ ಅಥವಾ (ಸಿ) ಖಂಡದ ಮೇರೆಗೆ ಅಪರಾಧ ಮಾಡಲಾಗಿರುವ ಯಾವುದೇ ಸಂದರ್ಭದಲ್ಲಿ, ಅಪರಾಧ ನಿರ್ಣಯಿಸುವ ಮ್ಯಾಜಿಸ್ಟ್ರೇಟನು,–

(ಎ) ಯಾವ ಪೆಟ್ರೋಲಿಯಂಗೆ ಸಂಬಂಧಪಟ್ಟಂತೆ ಅಪರಾಧ ಎಸಗಲಾಗಿದೆಯೋ ಆ ಪೆಟ್ರೋಲಿಯಂನ್ನು; ಅಥವಾ

(ಬಿ) ಅಪರಾಧಿಯು, ಅವನಿಗೆ ಸಂದರ್ಭಾನುಸಾರ, ಆಮದು ಮಾಡಿಕೊಳ್ಳಲು, ಸಾಗಿಸಲು ಅಥವಾ ದಾಸ್ತಾನು ಮಾಡಲು ಅನುಮತಿಸಲಾಗಿರುವ ಪ್ರಮಾಣಕ್ಕೆ ಮೀರಿದ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುತ್ತಿರುವ, ಸಾಗಿಸುತ್ತಿರುವ ಅಥವಾ ದಾಸ್ತಾನು ಮಾಡುತ್ತಿರುವ ಅಪರಾಧಿಯೆಂದು ನಿರ್ಣೀತನಾಗಿದ್ದರೆ, ಯಾವ ಪೆಟ್ರೋಲಿಯಂಗೆ ಸಂಬಂಧಪಟ್ಟಂತೆ ಅಪರಾಧ ಎಸಗಲಾಗಿದೆಯೋ ಆ ಪೂರ್ಣ ಪೆಟ್ರೋಲಿಯಂನ್ನು

– ಯಾವ ಧಾರಕಗಳಲ್ಲಿರುವುದೋ ಆ ಧಾರಕಗಳ ಸಮೇತ ವಶಪಡಿಸಿಕೊಳ್ಳತಕ್ಕದ್ದೆಂದು ನಿರ್ದೇಶಿಸಬಹುದು.

(2) ಈ ಅಧಿಕಾರವನ್ನು ಉಚ್ಚ ನ್ಯಾಯಾಲಯವು, ತನ್ನ ಅಪೀಲು ಅಥವಾ ಪುನರೀಕ್ಷಣಾ ಅಧಿಕಾರಗಳನ್ನು ಚಲಾಯಿಸುವಾಗಲೂ ಚಲಾಯಿಸಬಹುದು.

**25. ಅಧಿಕಾರ ವ್ಯಾಪ್ತಿ.**– ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಗಳನ್ನು ಪ್ರೆಸಿಡೆನ್ಸಿ ಪಟ್ಟಣಗಳಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನು ಮತ್ತು ಬೇರೆ ಕಡೆಗಳಲ್ಲಿ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಅಥವಾ ಈ ಸಂಬಂಧವಾಗಿ ಕೇಂದ್ರ ಸರ್ಕಾರವು ವಿಶೇಷವಾಗಿ ಅಧಿಕಾರ ನೀಡಿರುವ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು ಅಧಿವಿಚಾರಣೆ ಮಾಡತಕ್ಕದ್ದು.

**26. ಪ್ರವೇಶಿಸಲು ಮತ್ತು ಶೋಧನೆ ಮಾಡಲು ಅಧಿಕಾರ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾರೇ ಅಧಿಕಾರಿಗೆ ಅವನ ಹೆಸರಿನಿಂದ ಅಥವಾ ಪದದ ಬಲದಿಂದ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿಯಲ್ಲದೆ, ಯಾವ ಸ್ಥಳದಲ್ಲಿ ಯಾವುದೇ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳಲಾಗುತ್ತಿದೆ, ಸಾಗಿಸಲಾಗುತ್ತಿದೆ, ದಾಸ್ತಾನು ಮಾಡಲಾಗುತ್ತಿದೆ, ಉತ್ಪಾದಿಸಲಾಗುತ್ತಿದೆ, ಸಂಸ್ಕರಣ ಅಥವಾ ಸಮ್ಮಿಶ್ರಣ ಮಾಡಲಾಗುತ್ತಿದೆ ಎಂದು ನಂಬಲು ಅವನಿಗೆ ಕಾರಣಗಳಿವೆಯೋ ಅಂಥ ಯಾವುದೇ ಸ್ಥಳಕ್ಕೆ ಪ್ರವೇಶಿಸಲು ಮತ್ತು ಶೋಧಿಸಲು ಮತ್ತು ಯಾವ ಪೆಟ್ರೋಲಿಯಂಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಅಪರಾಧವನ್ನು

ಎಸಗಲಾಗಿದೆಯೆಂದು ಅಭಿಪ್ರಾಯಪಡುವನೋ ಆ ಯಾವುದೇ ಅಥವಾ ಎಲ್ಲ ಪೆಟ್ರೋಲಿಯಂನ್ನು ವಶಪಡಿಸಿಕೊಳ್ಳಲು ಅಥವಾ ತಡೆಹಿಡಿಯಲು ಅಥವಾ ತೆಗೆದುಹಾಕಲು ಅಧಿಕಾರ ನೀಡಬಹುದು.

(2) ಶೋಧನೆಗಳಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973ರ ಉಪಬಂಧಗಳು ಅನ್ವಯವಾಗುವಷ್ಟರಮಟ್ಟಿಗೆ ಈ ಪ್ರಕರಣದ ಮೇರೆಗೆ ಅಧಿಕಾರ ಪಡೆದ ಅಧಿಕಾರಿಗಳು ನಡೆಸುವ ಶೋಧನೆಗಳಿಗೂ ಅನ್ವಯವಾಗತಕ್ಕದ್ದು.

(3) ಕೇಂದ್ರ ಸರ್ಕಾರವು, (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಈ ಪ್ರಕರಣದ ಮೇರೆಗೆ, ಆದರೆ ಅಧಿಕೃತ ಅಧಿಕಾರಿಗಳು ತಮ್ಮ ಅಧಿಕಾರಗಳನ್ನು ಚಲಾಯಿಸುವಾಗ, ಅನುಸರಿಸಬೇಕಾದ ಕಾರ್ಯವಿಧಾನವನ್ನು ವಿನಿಯಮಿಸಿ ನಿಯಮಗಳನ್ನು ರಚಿಸಬಹುದು.

**27. ಪೆಟ್ರೋಲಿಯಂನಿಂದ ಉಂಟಾಗುವ ಅಪಘಾತಗಳ ಬಗ್ಗೆ ತಿಳಿವಳಿಕೆ ನೀಡುವುದು.–** ಪೆಟ್ರೋಲಿಯಂನ್ನು ಸಂಸ್ಕರಿಸುವ, ಸಮ್ಮಿಶ್ರಣ ಮಾಡುವ ಅಥವಾ ಇಟ್ಟುಕೊಂಡಿರುವ ಯಾವುದೇ ಸ್ಥಳದಲ್ಲಿ ಅಥವಾ ಆ ಸ್ಥಳದ ಬಗ್ಗೆ ಅಥವಾ ಸ್ಥಳಕ್ಕೆ ಸಂಬಂಧಪಟ್ಟಂತೆ ಅಥವಾ ಪೆಟ್ರೋಲಿಯಂನ್ನು ಸಾಗಿಸುತ್ತಿರುವ, ಪೆಟ್ರೋಲಿಯಂನ್ನು ತುಂಬಿಸುತ್ತಿರುವ ಅಥವಾ ಖಾಲಿ ಮಾಡುತ್ತಿರುವ ಯಾವುದೇ ವಾಹನದಲ್ಲಿ ಅಥವಾ ಹಡಗಿನಲ್ಲಿ ಅಥವಾ ಪೆಟ್ರೋಲಿಯಂಗೆ ಅಥವಾ ಪೆಟ್ರೋಲಿಯಂನ ಆವಿಗೆ ಬೆಂಕಿ ಹೊತ್ತಿಕೊಂಡ ಪರಿಣಾಮವಾಗಿ ಉಂಟಾದ ಯಾವುದೇ ಸ್ಫೋಟದಿಂದ ಅಥವಾ ಬೆಂಕಿ ಅಪಘಾತದಿಂದಾದ ಯಾವುದೇ ದುರ್ಘಟನೆಯಿಂದ ಯಾವುದೇ ಮಾನವ ಜೀವಹಾನಿ ಉಂಟಾದಾಗ ಅಥವಾ ವ್ಯಕ್ತಿಗೆ ಅಥವಾ ಆಸ್ತಿಪಾಸ್ತಿಗೆ ಗಂಭೀರ ಸ್ವರೂಪದ ಹಾನಿಯುಂಟಾದಾಗ ಅಥವಾ ಸಾಮಾನ್ಯವಾಗಿ ಅಂಥ ನಷ್ಟ ಅಥವಾ ಹಾನಿ ಉಂಟಾಗುವಂಥ ಪ್ರಕಾರದ ದುರ್ಘಟನೆ ಉಂಟಾದಾಗ ಸಂದರ್ಭಾನುಸಾರ, ಆ ಸ್ಥಳದ ಅಧಿಭೋಗದಾರನು ಅಥವಾ ತತ್ಕಾಲದಲ್ಲಿ ಪೆಟ್ರೋಲಿಯಂನ ಪ್ರಭಾರದಲ್ಲಿರುವ ವ್ಯಕ್ತಿಯು ಅಥವಾ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು ಅಥವಾ ಹಡಗಿನ ಯಜಮಾನನು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ರೀತಿಯಲ್ಲಿ, ಸಂಭವಿಸಿದ ಜೀವಹಾನಿ ಅಥವಾ ವ್ಯಕ್ತಿಗೆ ಆದ ಗಾಯ ಅಥವಾ ಸ್ವತ್ತಿಗೆ ಆದ ಹಾನಿ, ಯಾವುದಾದರೂ ಇದ್ದರೆ ಆ ಬಗ್ಗೆ ಹತ್ತಿರದ ಮ್ಯಾಜಿಸ್ಟ್ರೇಟನಿಗೆ ಅಥವಾ ಹತ್ತಿರದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಮತ್ತು ಸ್ಫೋಟಕಗಳ ಮುಖ್ಯ ನಿಯಂತ್ರಕರಿಗೆ ತಿಳಿಸತಕ್ಕದ್ದು.

**28. ಪೆಟ್ರೋಲಿಯಂನಿಂದ ಉಂಟಾದ ಗಂಭೀರ ಅಪಘಾತಗಳ ಬಗ್ಗೆ ವಿಚಾರಣೆಗಳು.–** (1) ದುರ್ಮರಣ ವಿಚಾರಣಾಧಿಕಾರಿ ಅಧಿನಿಯಮ, 1871ರ 8ನೇ ಪ್ರಕರಣವು ಸನ್ನಿವೇಶಗಳಿಗೆ ಅನ್ವಯವಾಗುವ ಹೊರತು, ಪೆಟ್ರೋಲಿಯಂಗೆ ಅಥವಾ ಪೆಟ್ರೋಲಿಯಂ ಆವಿಗೆ ಬೆಂಕಿ ಹೊತ್ತಿಕೊಂಡಿದ್ದರಿಂದಾಗಿ ಸಂಭವಿಸಿದ್ದೆಂದು ಮ್ಯಾಜಿಸ್ಟ್ರೇಟನು ನಂಬಲು ಕಾರಣವಿರುವಂಥ ಅಪಘಾತದಿಂದ ಯಾರೇ ವ್ಯಕ್ತಿ ಸಾವಿಗೆ ಈಡಾಗಿರುವಂಥ ಎಲ್ಲ ಪ್ರಕರಣಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆ, 1973ರ 176ನೇ ಪ್ರಕರಣದಲ್ಲಿ ಹೇಳಿರುವ ವಿಚಾರಣೆಯನ್ನು ನಡೆಸತಕ್ಕದ್ದು.

(2) ಶವ ಪಂಚನಾಮೆಯನ್ನು ನಡೆಸುವುದಕ್ಕೆ ಅಧಿಕಾರ ಹೊಂದಿರುವ ಯಾರೇ ಮ್ಯಾಜಿಸ್ಟ್ರೇಟನು ಅಪಘಾತವು ಪೆಟ್ರೋಲಿಯಂಗೆ ಬೆಂಕಿ ಹೊತ್ತಿಕೊಂಡ ಅಥವಾ ಪೆಟ್ರೋಲಿಯಂ ಆವಿಗೆ ಬೆಂಕಿ ಹೊತ್ತಿಕೊಂಡ ಪರಿಣಾಮದಿಂದ ಆದುದೆಂದು ತಾನು ನಂಬಲು ಕಾರಣಗಳಿರುವಂಥ ದುರ್ಘಟನೆಯಿಂದ ಯಾರೇ ವ್ಯಕ್ತಿಯು ಸಾವಿಗೆ ಈಡಾಗಿರದಿದ್ದರೂ, ಆ ವ್ಯಕ್ತಿಗೆ ಗಂಭೀರ ಸ್ವರೂಪದ ಗಾಯವುಂಟಾಗಿದ್ದರೆ ಅಥವಾ ಆಸ್ತಿಪಾಸ್ತಿಗೆ ಹಾನಿಯುಂಟಾಗಿದ್ದರೆ, ಅಂಥ ದುರ್ಘಟನೆಯ ಬಗ್ಗೆ ಸದರಿ ಪ್ರಕರಣದ ಮೇರೆಗೆ ವಿಚಾರಣೆಯನ್ನು ಸಹ ನಡೆಸಬಹುದು.

(3) (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಪೊಲೀಸ್ ಆಯುಕ್ತನನ್ನು ಶವ ಪಂಚನಾಮೆ ನಡೆಸುವುದಕ್ಕೆ ಅಧಿಕಾರ ಹೊಂದಿರುವ ಮ್ಯಾಜಿಸ್ಟ್ರೇಟ್ ಎಂಬುದಾಗಿ ಭಾವಿಸತಕ್ಕದ್ದು.

(4) ಇದಕ್ಕೆ ಅನುಸಾರವಾಗಿ ನಡೆದ ಎಲ್ಲಾ ವಿಚಾರಣೆಗಳ ಮತ್ತು (1)ನೇ ಉಪಪ್ರಕರಣವು ಅನ್ವಯವಾಗುವಂಥ ಪ್ರಕರಣದಲ್ಲಿ ದುರ್ಮರಣ ವಿಚಾರಣಾಧಿಕಾರಿಯು ನಡೆಸಿದ ಯಾವುದೇ ವಿಚಾರಣೆಯ ಫಲಿತಾಂಶವನ್ನು ಸಾಧ್ಯವಾದಷ್ಟು ಬೇಗನೆ, ಕೇಂದ್ರ ಸರ್ಕಾರಕ್ಕೆ, ಸ್ಫೋಟಕಗಳ ಮುಖ್ಯ ನಿಯಂತ್ರಕರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

## ಅಧ್ಯಾಯ – IV

## ಪೂರಕ

**29. ನಿಯಮಗಳಿಗೆ ಸಂಬಂಧಿಸಿದ ಉಪಬಂಧಗಳು.–** (1) ಈ ಅಧಿನಿಯಮದ ಮೇರೆಗೆ ಯಾವುದೇ ನಿಯಮಗಳನ್ನು ರಚಿಸುವಾಗ, ಕೇಂದ್ರ ಸರ್ಕಾರವು,–

(ಎ) ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುವುದರಿಂದ, ಸಾಗಣೆ, ದಾಸ್ತಾನು, ಉತ್ಪಾದನೆ, ಸಂಸ್ಕರಣ ಅಥವಾ ಸಮ್ಮಿಶ್ರಣ ಮಾಡುವುದರಿಂದ ಸಂಭವಿಸಬಹುದಾದ ಅಪಾಯದಿಂದ ಸಾರ್ವಜನಿಕರನ್ನು ರಕ್ಷಿಸಲು ಉಪಬಂಧ ಕಲ್ಪಿಸುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರೆ, ಅಂಥ ನಿಯಮಗಳಿಗೆ ಅನುಗತವಾದ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು; ಮತ್ತು

(ಬಿ) ಯಾವುದೇ ರಾಜ್ಯದ ಅಥವಾ ಸ್ಥಳದ ವಿಶೇಷ ಸಂದರ್ಭಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ ಕಲ್ಪಿಸಬಹುದು.

(2) ನಿಯಮಗಳನ್ನು ರಚಿಸಲು ಈ ಅಧಿನಿಯಮದ ಮೂಲಕ ಪ್ರದತ್ತವಾದ ಪ್ರತಿಯೊಂದು ಅಧಿಕಾರವು ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟಿರತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಎಲ್ಲ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**30. ಇತರೆ ವಸ್ತುಗಳಿಗೆ ಅಧಿನಿಯಮವನ್ನು ಅನ್ವಯಿಸಲು ಅಧಿಕಾರ.–** ಸುಲಭ ದಹ್ಯ ವಸ್ತುಗಳ ಅಧಿನಿಯಮ, 1952 (1952ರ XX)ರ 7ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

**31. ಪೆಟ್ರೋಲಿಯಂ ಮೇಲೆ ಸ್ಥಳೀಯ ಪ್ರಾಧಿಕಾರಗಳ ಅಧಿಕಾರಗಳನ್ನು ಪರಿಮಿತಿಗೊಳಿಸಲು ಅಧಿಕಾರ.–** ಪೆಟ್ರೋಲಿಯಂನ ಸಾಗಣೆಗೆ ಅಥವಾ ದಾಸ್ತಾನಿಗೆ ಸಂಬಂಧಪಟ್ಟಂತೆ ಯಾವುದೇ ಅಧಿನಿಯಮಿತಿಯು ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಅಧಿಕಾರಗಳನ್ನು ನೀಡಿದ್ದರೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,–

(ಎ) ಅಂಥ ಅಧಿನಿಯಮಿತಿಯ ಜಾರಿಯನ್ನು ಪರಿಮಿತಿಗೊಳಿಸಬಹುದು; ಅಥವಾ

(ಬಿ) ತಾನು ಸೂಕ್ತವೆಂದು ಭಾವಿಸಬಹುದಾದ ಯಾವುದೇ ರೀತಿಯಲ್ಲಿ ಅಂಥ ಅಧಿಕಾರಗಳನ್ನು ಚಲಾಯಿಸುವುದನ್ನು ನಿರ್ಬಂಧಿಸಬಹುದು.

**32. [ನಿರಸನಗಳು].–** ನಿರಸನಗೊಳಿಸುವ ಅಧಿನಿಯಮ, 1938ರ (1938ರ 1) ಪ್ರಕರಣ 2 ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

ಅನುಸೂಚಿ.– [ನಿರಸಿತ ಅಧಿನಿಯಮಿತಿಗಳು] [ನಿರಸನಗೊಳಿಸುವ ಅಧಿನಿಯಮ, 1938ರ (1938ರ 1) ಪ್ರಕರಣ 2 ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ].

* * * * *